ಸಿ.ಸಿ .ನಂ. 174/2023 ಪಿಡಬ್ಲೂಃ 1

ದಿನಾಂಕಃ 11-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ.ಎಸ್.ಎನ್. ವಕೀಲರಿಂದಃ**

ನಾವು ಎಕ್ಸಲೆಂಟ್ ಸೊಫ್ಟವೇರ್ ಮೂಲಕ ನಮ್ಮ ಅಕೌಂಟ್ಸ ಸ್ಟೆಟಮೆಂಟ್ ಗಳನ್ನು ಮಾಡುತ್ತೇವೆ . ಸೊಫ್ಟವೇರ್ ಅಳವಡಿಸಿಕೊಂಡಿದ್ದರಿಂದ ಅಕೌಂಟ್ಸ ಸ್ಟೆಟಮೆಂಟ್ ನ್ನು ಯಾವಾಗ ತೆಗೆದರೂ ಒಂದೇ ರೀತಿಯ ಸ್ಟೇಟಮೆಂಟ್ ಇರುತ್ತದೆ. ಯಾವುದೇ ರೀತಿಯ ವ್ಯತ್ಯಾಸ ಇರುವುದಿಲ್ಲ ಎಂದರೆ ಸರಿ. ಇವತ್ತಿನ ದಿನಕ್ಕೆ ಪ್ರಿಂಟ್ ತೆಗೆದಾಗ ಇವತ್ತಿನ ದಿನಕ್ಕೆ ಏನು ಎಂಟ್ರಿ ಇದೆ ಅದು ಬರುತ್ತದೆ ಎಂದರೆ ಸರಿ . ಒಂದು ವರ್ಷದ ಹಿಂದೆ ತೆಗೆದ ಅಕೌಂಟ್ಸ ಸ್ಟೇಟಮೆಂಟ್ ನ ಎಂಟ್ರಿ ಈಗ ಸ್ಟೇಟಮೆಂಟ್ ನ ಪ್ರಿಂಟ್ ತೆಗೆದಾಗ ಅದನ್ನು ಒಳಗೊಂಡು ಬರುತ್ತದೆ ಎಂದರೆ ಸರಿ. ಅದು ಬೇರೆ ರೀತಿ ಬರಬೇಕು ಎಂದರೆ ಬೇರೆ ಸೋಫ್ಟವೇರ್ ಬಳಸಿ ಅದನ್ನು ಬೇರೆ ಗಣಕಯಂತ್ರದಲ್ಲಿ ತೆಗೆದಾಗ ಮಾತ್ರ ವ್ಯತ್ಯಾಸ ಬರಲು ಸಾಧ್ಯ ಎಂದರೆ ಸರಿ . ಮೇಲಿನ ಸೋಫ್ಟವೇರ್ ನ್ನು ನಾವು 2017 ರಿಂದ ಪ್ರಾರಂಭಿಸಿದ್ದೇವೆ. ಒಮ್ಮೆ ಗಣಕಯಂ ತ್ರದಲ್ಲಿ ಸಾಲಗಾರ , ಜಾಮೀನುದಾರರ ಹೆಸರು, ಸಾಲದ ಮೊತ್ತ, ಬಡ್ಡಿ ದಂಡದ ಬಡ್ಡಿ ಅಪಲೋಡ್ ಆದರೆ ಅದರಲ್ಲಿ ಬದಲಾವಣೆ ಆಗುವುದಿಲ್ಲ ಎಂದರೆ ಸರಿ . ಅಕೌಂಟ್ಸ ಸ್ಟೆಟಮೆಂಟ್ ನಲ್ಲಿ ನಾವು ತೋರಿಸಿದ ಬಡ್ಡಿಯನ್ನು ಹೆರತುಪಡಿಸಿ ಬೇರೆ ಬಡ್ಡಿ ಆಕರಣೆ ಮಾಡಲು ಆಗುವುದಿಲ್ಲ ಸಾಕ್ಷಿ ಸಾಲದ ಕಟಬಾಕಿ ಆದ ನಂತರ ಸಿಸ್ಟಮ್ ನಲ್ಲಿ ಸಿಂಪಲ್ ಇಂಟರಸ್ಟ ಇರುವುದು ಕಂಪೌಂಡ ಇಂಟರಸ್ಟ ತೆಗೆದುಕೊಳ್ಳುತ್ತದೆ. ಆಗ ನಾವು ಸೋಫ್ಟವೇರ್ ನವರನ್ನು ಸಿಂಪಲ್ ಇಂಟರಸ್ಸ ಕೆಲಕ್ಯುಲೇಟ್ ಮಾಡಿಕೊಡುಂತೆ ಕೇಳಿಕೊಳ್ಳುತ್ತೇವೆ. ದಂಡದ ಬಡ್ಡಿ ಎಷ್ಟು ಆಕರಣೆ ಮಾಡುತ್ತೇವೆ ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ ಎಂದರೆ ಸರಿ . ದಂಡದ ಬಡ್ಡಿಯ ಬಗ್ಗೆ ಅಕೌಂಟ್ಸ ಸ್ಟೆಟಮೆಂಟನಲ್ಲಿ ನಿಖರವಾಗಿ ತೋರಿಸಬೇಕಾಗುತ್ತದೆ ಎಂದರೆ ಸರಿ . ದಂಡದ ಬಡ್ಡಿಯ ಬಗ್ಗೆ ಸಾಲಗಾರರಿಗೆ ತಿಳಿಸದೇ ಇದ್ದಾಗ ಅದನ್ನು ಆಕರಣೆ ಮಾಡಲು ಆಗುವುದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ಸಾಲದ ಕರಾರಿನಲ್ಲಿಯೇ ಇರುತ್ತದೆ ಎಂದು ನುಡಿದಿರುತ್ತಾರೆ . ಸಾಕ್ಷಿ ಮುಂದುವರಿದು ನೋಟಿಸ್ ನಲ್ಲಿಯೂ ಹೇಳಿರುತ್ತೇವೆ ಎಂದು ನುಡಿಯುತ್ತಾರೆ.

ಈ ಪ್ರಕರಣದಲ್ಲಿ ದಿಗಂಬರ ಗಣಪತಿ ಅಂಬಿಗ ಇವರು ಜಾಮೀನುದಾರರಾಗಿರುತ್ತಾರೆ . ಇನ್ನೂ ಇಬ್ಬರು ಜಾಮೀನುದಾರರ ಹೆಸರು ನೆನಪಾಗುತ್ತಿಲ್ಲ .ಪುಷ್ಪಾ ಗಣಪತಿ ಅಂಬಿಗ ಇವರಿಗೆ ಒಂದೇ ಸಾಲ ನೀಡಿರುತ್ತೇವೆ. ಒಂದೇ ಖಾತೆಗೆ 2-3 ಜನರಿಗೆ ಸಾಲವನ್ನು ಕೊಡುವುದಿಲ್ಲ. ನಾವು ಹಾಜರುಪಡಿಸಿದ ಅಕೌಂಟ್ಸ ಸ್ಟೇಟಮೆಂಟ್ ನಿಪಿ.11 ಸಾಲದ ಖಾತೆ 1178 ಎಂದರೆ ಸರಿ. ನಿಪಿ.11ರ ಪ್ರಕಾರ ದಿಗಂಬರ

ಗಣಪತಿ ಅಂಬಿಗ ಹಾಗೂ ನಿಲೇಶ ಅಂಬಿಗ ಇವರು ಜಾಮೀನುದಾರರು ಎಂದರೆ ಸಾಕ್ಷಿ ಸೋಫ್ಟವೇರ್ ನಿಂದ ಆ ರೀತಿ ಬಂದಿರಬಹುದು ಎಂದು ನುಡಿದಿರುತ್ತಾರೆ . ಅಕೌಂಟ್ಸ ಸ್ಟೇಟಮೆಂಟ್ ನಿಖರವಾಗಿ ನೋಡಿಕೊಳ್ಳುವುದು ನಮ್ಮ ಸಹಕಾರಿ ಹಾಗೂ ಶಾಖಾ ವ್ಯವಸ್ಥಾಪಕರ ಕೆಲಸ ಎಂದರೆ ಸರಿ . ಒಂದು ವೇಳೆ ಜಾಮೀನುದಾರರ ಹೆಸರು ತಪ್ಪಾಗಿದ್ದರೆ ಕೆಲವೆ ದಿನಗಳಲ್ಲಿ ಅದು ಅಕೌಂಟ್ಸ ಸ್ಟೆಟಮೆಂಟ್ ನಲ್ಲಿ ಕಂಡು ಬರುತ್ತದೆ ಎಂದರೆ ಸರಿ . ಆ ರೀತಿ ಕಂಡು ಬಂದ ನಂತರ ನಾವು ಅದನ್ನು ಸೋಫ್ಟವೇರ್ನವರಿಗೆ ಹೇಳಿ ಸರಿಪಡಿಸುತ್ತೇವೆ. ನಿಪಿ.11 ಅಕೌಂಟ್ಸ ಸ್ಟೇಟಮೆಂಟ್ ಈ ಕೇಸಿನ ಸಾಲಕ್ಕೆ ಸಂಬಂಧಪಟ್ಟಿರುತ್ತದೆ. ಒಂದು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ ಸದರಿ ದಾಖಲಾಗಿ ಸರಿ ಇದೆ ಎಂದು ಖಚಿತಪಡಿಸಿಕೊಂಡು ವ್ಯವಸ್ಥಾಪಕರು ನಮಗೆ ನೀಡುತ್ತಾರೆ ಎಂದರೆ ಸರಿ. ನಾವು ಕೂಡ ದಾಖಲಾತಿ ಸರಿ ಇದೆ ಎಂದು ಖಚಿತಪಡಿಸಿಕೊಂಡನಂತರ ನಮ್ಮ ವಕೀಲರಿಗೆ ಕೊಡುತ್ತೇವೆ ಎಂದರೆ ಸರಿ . ಈ ಪ್ರಕರಣದಲ್ಲಿರುವ ದಾಖಲಾತಿಗಳು ಸರಿ ಇದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇವೆ . ತಪ್ಪಾಗಿರುವುದನ್ನು ನಂತರ ಸರಿ ಪಡಿಸಿರುತ್ತೇವೆ. ಸಾಲದ ಖಾತೆ ಪ್ರಾರಂಭವಾದ ನಂತರ ಬರುವ ಮಾರ್ಚ ತಿಂಗಳಲ್ಲಿ ಅದನ್ನು ಸರಿಪಡಿಸಿಕೊಂಡಿದ್ದೇವೆ. ಸಾಲ ನೀಡಿರುವುದು 2019ರಲ್ಲಿ, 2020ರಲ್ಲಿ ಕೇಸ್ ನ್ನು ದಾಖಲು ಮಾಡಿದ್ದೇವೆ. ಸರಿ ಅಲ್ಲದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ನ್ಯಾಯಾಲಯವನ್ನು ತಪ್ಪು ದಾರಿಗೆ ಎಳೆದ ಹಾಗೆ ಎಂದರೆ ಸಾಕ್ಷಿ ನಮ್ಮ ಹತ್ತಿರ ಪೂರಕ ದಾಖಲಾತಿ ಇದೆ ಎಂದು ನುಡಿದಿರುತ್ತಾರೆ . ಸೋಫ್ಟವೇರ್ ಅಪಡೇಟ್ ಮಾಡಿಸಿದಾಗ ಅದನ್ನು ಸರಿ ಪಡಿಸಿದ್ದೇವೆ ಆ ದಾಖಲಾತಿ ಇದೆ. ಸೋಫ್ಟವೇರ್ ನ್ನು ಯಾವ ವರ್ಷದಲ್ಲಿ ಸರಿಪಡಿಸಿದ್ದೇವೆ ನೆನಪಿಲ್ಲ. ಸೋಫ್ಟವೇರ್ ಸರಿ ಇಲ್ಲದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ . ನ್ಯಾಯಾಲಯಕ್ಕೆ ಹಾಜರುಪಡಿಸಿದ ಸುಳ್ಳು ದಾಖಲೆಯನ್ನು ಸಮರ್ಥಿಸಿಕೊಳ್ಳಲು ಸಂದರ್ಭಕ್ಕೆ ತಕ್ಕ ಹಾಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಯಲ್ಲಿ ತಪ್ಪು ಇರುವುದರಿಂದ ಬೇರೆ ದಾಖಲಾತಿ ಹಾಜರುಪಡಿಸುತ್ತಿದ್ದೇನೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ಸರಿ . ಸಾಕ್ಷಿಗೆ ಒಂದು ದಾಖಲಾತಿಯನ್ನು ತೊರಿಸಲಾಗಿ ಅದ ಯಾವ ಪ್ರಕರಣಕ್ಕೆ ಸಂಬಂಧಪಟ್ಟದ್ದು ಎಂದು ಕೇಳಲಾಗಿ ಇದೇ ಪ್ರಕರಣದ ಸಾಲಕ್ಕೆ ಸಂಬಂಧಪಟ್ಟಿದ್ದು ಎಂದು ನುಡಿದಿರುತ್ತಾರೆ . ಸದರಿ ಪ್ರಿಂಟ್ ನ್ನು ಸೆಪ್ಟೆಂಬರ್ 2025 ರಂದು ತೆಗೆಯಲಾಗಿದೆ. ಸಾಕ್ಷಿ ಸದರಿ ಸ್ಟೆಟಮೆಂಟ್ ನ್ನು ನೋಡಿ ಗಗರುತಿಸದಿದ್ದಂದ ಸದರಿ ದಾಖಲಾತಿಯನ್ನು

ನಿಡಿ.1 ಎಂದು ಗುರುತಿಸಲಾಯಿತು. ಈ ದಾಖಲಾತಿಯ ಪ್ರಕಾರ ದಿಃ 10-10-2024 ರಂದು ಬಡ್ಡಿ ಮೊತ್ತ ರೂ 1,74,630.98 ನಮೂದಾಗಿದೆ ಎಂದರೆ ಸರಿ. ಅಸದರಿ ದಾಖಲಾತಿಯ ಮೇಲೆ ಇರುವ ಸಹಿ ನಮ್ಮ ಶಾಖಾ ವ್ಯವಸ್ಥಾಪಕರದ್ದು. ಕಿರಿಯ ಸಹಾಯಕರು ಎಂಬಲ್ಲಿ ಇರುವ ಸಹಿ ನನ್ನದು ಎಂದರೆ ಸರಿ. ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಅಕೌಂಟ್ಸ ಸ್ಟೆಟಮೆಂಟ್ ನ್ನು ತೋರಿಸಲಾಗಿ ಅದು ಇದೇ ಸಾಲದ ಖಾತೆಗೆ ಸಂಬಂಧಪಟ್ಟದು ಎಂದು ನೋಡಿ ಗುರುತಿಸಿರುತ್ತಾರೆ. ಕಾರಣ ಸದರಿ ದಾಖಲಾತಿಯನ್ನು ನಿಡಿ.2 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯ ಮೇಲೆ ಇರುವ ನಮ್ಮ ಶಾಖಾ ವ್ಯವಸ್ಥಾಪಕರದ್ದು ಎಂದರೆ ಸರಿ. ಈ ದಾಖಲಾತಿಯ ಪ್ರಕಾರ ಬಡ್ಡಿ ಮೊತ್ತ ದಿಃ 10.10.2024 ರಂದು ರೂ. 1,48,162.22 ನಮೂದಾಗಿದೆ ಎಂದರೆ ಸರಿ. ನಾವು ಹಾಜರುಪಡಿಸಿದ ನಿಪಿ.13 ರ ಪ್ರಕಾರ ದಿಃ 10.10.2024 ರಂದು ಬಡ್ಡಿ ಮೊತ್ತ 1,53,357.74 ನಮೂದಿದೆ ಎಂದರೆ ಸರಿ. ಈ ಪ್ರಕರಣದ ಆರೋಪಿ ದಿಃ 08.10.2015 ರಂದು 1,00,000/- ಸಾಲವನ್ನು ಪಡೆದಿದ್ದರು ಎಂದರೆ ಸರಿ. ಎಸ್.ಬಿ. ದಾಖಲಾತಿಯಲ್ಲಿ ತೆಗೆದರೆ ಅದು ಆರಂಭದಿಂದ ಇಲ್ಲಿಯ ದಿನಾಂಕದವರೆಗೆ ಪ್ರಿಂಟ್ ಬರುತ್ತದೆ ಎಂದರೆ ಸರಿ. ಎಸ್.ಬಿ. ಖಾತೆ ಆರಂಭವಾದ ದಿನಾಂಕ ನೆನಪಿಲ್ಲ. ನಿಪಿ.14 ಎಸಿ.ಬಿ. ಖಾತೆ ಆರಂಭವಾದ ದಿನಾಂಕದಿಂದ ಇಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಅದನ್ನು ಮರೆಮಾಚಿದ್ದೀರಿ ಎಂದರೆ ಸಾಕ್ಷಿ ಈ ಸಾಲದ ಟ್ರಾನಜೆಕ್ಷನ್ ಎಸ್.ಬಿ. ಖಾತೆಗೆ ಆದದ್ದನ್ನು ತೋರಿಸಿ ಎಂದು ಕೇಳಿದ್ದಕ್ಕೆ ನಿಪಿ.14 ನ್ನು ಹಾಜರುಪಡಿಸಿದ್ದೇವೆ. ಆರೋಪಿ ಪರ ವಕೀಲರು ಕೇಳಿದ್ದರಿಂದ ನಿಪಿ.14 ನ್ನು ಹಾಜರುಪಡಿಸಿದ್ದೇವೆ. ಆರೋಪಿಯ ಉಳಿತಾಯ ಖಾತೆಯ ಸಂಪೂರ್ಣ ವಿವರ ಕೇಳಿದ್ದರೆ ಹೊರತು ನಾನು ಹೇಳಿದಂತೆ ಲೋನ್ ಟ್ರಾನಜೆಕ್ಷನ್ ಗೆ ಸಂಬಂಧಪಟ್ಟಂತೆ ಕೇಳಿಲ್ಲ ಎಂದರೆ ಸರಿಯಲ್ಲ . ನಾನು ಉದ್ದೇಶಪೂರ್ವಕವಾಗಿ ಸಂಪೂರ್ಣ ವಿವರಣೆ ಇಲ್ಲದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . 2015 ರಂದು ಪಡೆದುಕೊಂಡ ಸಾಲವನ್ನು ಆರೋಪಿ ಸಂಪೂರ್ಣವಾಗಿ ಚುಕ್ತಾ ಪಡಿಸಿದ್ದಾರೆ ಎಂದರೆ ಸರಿ. ಆ ಸಾಲವನ್ನು ಚುಕ್ತಾಪಡಿಸಿದ ನಂತರ ಆರೋಪಿ ಬೇರೆ ಸಾಲಕ್ಕೆ ಯಾವತ್ತೂ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ . ಆರೋಪಿ ಸಾಲದ ಅರ್ಜಿ ಸಲ್ಲಿಸಿಲ್ಲ ಕಾರಣ ನಮ್ಮ ಬ್ಯಾಂಕಿನವರು ಸಾಲ ಮಂಜೂರು ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಿಂದ ನಿಪಿ.10 ರವರೆಗಿನ ದಾಖಲೆಗಳು 2015 ರಲ್ಲಿ ಪಡೆದ ಸಾಲಕ್ಕೆ ನೀಡಿದಂತಹ ದಾಖಲಾತಿಗಳು ಎಂದರೆ ಸರಿಯಲ್ಲ. ಆ ಸಂದರ್ಭಗಳಲ್ಲಿ ಕೊಟ್ಟಂತಹ ದಾಖಲಾತಿಗಳನ್ನು ಇಟ್ಟುಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಅಕ್ರೌಟ್ಸ ಸ್ಟೇ ಟಮಂಟ್ ಸಾಲದ ಖಾತೆ ಮತ್ತು

ಉಳಿತಾಯ ಖಾತೆ ಎರಡಕ್ಕೂ ಸಂಬಂಧಪಟ್ಟಂತೆ ಬರುತ್ತದೆ ಎಂದರೆ ಸರಿ . ನಿಪಿ.13 ಮತ್ತು 14 ನಾವು ಸೃಷಿಟಮಾಡಿದಂತಹ ದಾಖಲಾತಿಗಳು ಎಂದರೆ ಸರಿಯಲ್ಲ. ಒಂದು ವೇಳೆ ನಮ್ಮ ಸೊಫ್ಟಮೆಂರ್ ಮಾುಲಕ ಪ್ರಂಟ್ ತೆಗೆದಿದ್ದರೆ ಸಂಪೂರ್ಣ ವಿವರ ಬರುತ್ತಿದ್ದವು ಎಂದರೆ ಸಾಕ್ಷಿ ಎಸ್ .ಬಿ. ಸ್ಟೇಟಮೆಂಟ್ ನ್ನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಬೇಕು ತೆಗೆಯಬಹುದು ಎಂದು ನುಡಿಯುತ್ತಾರೆ . ಆರೋಪಿ ಪಡೆದಿರುವ 2015 ರ ಸಾಲಕ್ಕೆ ಇಬ್ಬರು ಮಾತ ಜಾಮೀನುದಾರರು ಇದ್ದರು ಎಂದರೆ ಸರಿ. ಅವರು ನಿಲೇಶ ಅಂಬಿಗ ಹಾಗೂ ದಿಗಂಬರ ಅಂಬಿಗ ಎಂದರೆ ಸರಿ . ನಿಪಿ.13 ಮತ್ತು 14 ಪ್ರಕರಣ ದಾಖಲಿಸಿದಾಗ ಹಾಜರುಪಡಿಸಿದ ದಾಖಲೆಗಳಲ್ಲ ಎಂದರೆ ಸರಿ. ಈ ಎರಡು ದಾಖಲಾತಿಗಳನ್ನು ಪ್ರಕರಣವನ್ನು ದಾಖಲಿಸಿದ 5 ವರ್ಷಗಳ ನಂತರ ಹಾರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಾವು ದಾಖಲಿಸಿರುವುದು ಸುಳ್ಳು ಪ್ರಕರಣ ಎಂದು ಗೊತ್ತಾಗುತ್ತದೆ ಎಂದು ನಮ್ಮ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ಸಾಲ ಅರ್ಜಿಯಲ್ಲಿರುವ ಅರ್ಜಿದಾರರ ಸಹಿ ಎನ್ನುವಲ್ಲಿ ಇರುವ ಸಹಿ ಸರಿಯಾಗಿ ಅಕ್ಷರವನ್ನು ಗುರುತಿಸಲು ಆಗದೇ ಇರುವ ರೀತಿಯಲ್ಲಿ ಇದೆ ಎಂದರೆ ಸರಿ . ನಿಪಿ.6 ರಲ್ಲಿರುವ ಸಹಿ ಅಕ್ಷರದಲ್ಲಿ ಗುರುತಿಸುವ ರೀತಿಯಲ್ಲಿ ಇರುತ್ತದೆ ಎಂದರೆ ಸರಿ . ದಿವಗಿಯಲ್ಲಿ ಪುಷ್ಪಾ ಅಂಬಿಗ ಎಂಬ ಹೆಸರಿನವರು ಎಷ್ಟು ಜನ ಇದ್ದಾರೆ ಹೇಳಲು ಆಗುವುದಿಲ್ಲ . ನಿಪಿ.6 ರಲ್ಲಿರುವ ಸಹಿ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ಕಾರಣ ಆ ಬರವಣಿಗೆ ಯಾರು ಮಾಡಿದ್ದಾರೆ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ನಾವು ಹಾಜರುಪಡಿಸಿದ ಅಂಚೆ ನೊಟಿಸ್ ಆರೋಪಿಗೆ ತಲುಪಿಲ್ಲ ಬೆರೆ ಯಾವುದೋ ಪುಷ್ಪಾ ಎಂಬುವವರಿಗೆ ತಲುಪಿದೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ಪುಷ್ಪಾ ಎಂದು ಇದೆ ಅವರ ಪೂರ್ಣ ಹೆಸರು ಇಲ್ಲ ಎಂದರೆ ಸರಿ. ದಿವಗಿ ಎಂಬುವುದು ಅಲ್ಲಿ ಕಂಡು ಬರುವುದಿಲ್ಲ ಎಂದು ಸಾಕ್ಷಿ ಪಿನ್ ಕೋಡ್ ಇದೆ ಎಂದು ನುಡಿದಿರುತ್ತಾರೆ. ನಿಪಿ.6 ರಲ್ಲಿ ಪುಷ್ಪಾ ಎಂದು ಇರುವುದನ್ನು ಬಿಟ್ಟು ಮುಂದೆ ಯಾವುದೇ ರೀತಿಯ ಬರವಣಿಗೆ ಇಲ್ಲ ಎಂದರೆ ಸರಿ. ನಾವು ನೋಟಿಸ್ ನ್ನು ಆರೋಪಿತಳ ವಿಳಾಸಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ . ಚೆಕ್ ನಮೇಲೆ ಇರುವ ಬರವಣಿಗೆ ಯಾರು ಬರೆದಿದ್ದಾರೆ ಗೊತ್ತಿಲ್ಲ . ಚೆಕ್ ನಲ್ಲಿರುವ ಬರವಣಿಗೆ ನನ್ನ ಮುಂದೆ ಆಗಿಲ್ಲ . ಕಾರಣ ಚೆಕ್ ನ ಮೇಲೆ ಇರುವ ಬರವಣಿಗೆ ಯಾರು ಬರೆದಿದ್ದಾರೆ ನನಗೆ ಹೇಳಲು ಆಗುವುದಿಲ್ಲ . ಯಾವುದೇ ದಾಖಲೆಯ ಮೇಲೆ ಸಹಿ ಮಾಡುವಾಗ ಸಹಿಯನ್ನು ಸಾಕ್ಷಿದಾರರ ಸಮ್ಮುಖದಲ್ಲಿ ಪಡೆಯವಾಗುತ್ತದೆ. ಈ ಪ್ರಕರಣದಲ್ಲಿ ಯಾವ ಸಾಕ್ಷಿದಾರರ ಸಮ್ಮುಖದಲ್ಲಿ ದಾಖಲೆಗಳ ಸಹಿ ಪಡೆಯಲಾಗಿದೆ

ಗೊತ್ತಿಲ್ಲ. ಈ ಪ್ರಕರಣದಲ್ಲಿ ಸಾಲವನ್ನು ಕೊಟ್ಟಿದ್ದೇವೆ ಎಂದು ಹೇಳಲ ಪುರಾವೆ ಮಾಡಲು ಜಾಮೀನುದಾರರ ಸಾಕ್ಷಿ ವಿಚಾರಣೆ ಮಾಡಲು ತೊಂದರೆ ಇಲ್ಲ . ನಾವು ಹೇಳಿದಂತೆ ಆರೋಪಿತಳು ಕಾನೂನುಬದ್ಧವಾಗಿ ಮೊತ್ತವನ್ನು ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತಳ ವಿರುದ್ಧ ನಾವು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಮಾಡಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾವು ಸುಳ್ಳು ಪ್ರಕರಣದ ದಾಖಲಿಸಿದ ಕಾರಣ ಒಂದೇ ದಿನಾಂಕದಂದು ಹಲವು ರೀತಿಯ ಬಡ್ಡಿಯನ್ನು ತೋರಿಸಿದ್ದೇವೆ ಎಂದರೆ ಸರಿಯಲ್ಲ . ಸಾಕ್ಷಿ ನಾವು ಯಾವತ್ತಿನ ದಿನ ಸ್ಟೇಟಮೆಂಟ್ ತೆಗೆಯುತ್ತೇವೆ ಆ ದಿನಾಂಕದವರೆ ಬಡ್ಡಿ ಸೇರಿಸಿ ಬರುತ್ತದೆ ಎಂದು ನುಡಿಯುತ್ತಾರೆ . ನಾನು ಈ ಮೊದಲು ಹೇಳಿದ ಸಂಗತಿಯನ್ನು ಕ್ಷಣಾರ್ಧದಲ್ಲಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸಂದರ್ಭನುಸಾರ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.